ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ    ದಿನಾಂಕ : DATE : 21/10/2019

# 14 ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

## ನ.12ರಂದು ಮತದಾನ: ನಾಮಪತ್ರ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ, ಮಂಗಳೂರು ಮಹಾನಗರಪಾಲಿಕೆ, ಶಿವಮೊಗ್ಗ ಜಿಲ್ಲೆ ಜೋಗ- ಕಾರ್ಗಲ್ ಪಟ್ಟಣ ಪಂಚಾಯತಿ, ಬಳ್ಳಾರಿ ಜಿಲ್ಲೆ ಕಂಪ್ಲಿ ಪುರಸಭೆ, ಕೂಡ್ಲಗಿ ಪಟ್ಟಣ ಪಂಚಾಯತಿ ಸೇರಿ ಒಟ್ಟು 14 ನಗರ ಸ್ಥಳೀಯ ಸಂಸ್ಥೆಗಳಿಗೆ ನವೆಂಬರ್ 12ರಂದು ಚುನಾವಣೆ ನಡೆಯಲಿದೆ.

ರಾಜ್ಯ ಚುನಾವಣಾ ಆಯೋಗ ವೇಳಾ ಪಟ್ಟಿ ಪ್ರಕಟಿಸಿದ್ದು, ಇದೇ 24ರಂದು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆ ಹೊರಡಿಸಲಿದ್ದಾರೆ. ಅ. 20ರಿಂದಲೇ ಅನ್ವಯವಾಗುವಂತೆ ಚುನಾವಣೆ ನೀತಿಸಂಹಿತೆ ಜಾರಿಗೆ ಬಂದಿದ್ದು, ನ.14ರ ವರಗೂ ಜಾರಿಯಲ್ಲಿ ಇರುತ್ತದೆ.

ನಾಮಪತ್ರ ಸಲ್ಲಿಸಲು ಕೊನೆಯ ದಿನ ಅ.31, ನಾಮಪತ್ರಗಳ ಪರಿಶೀಲನೆ ನ.2, ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆ ದಿನ ನ.4, ಮತದಾನ ನ.12, ಮತಗಳ ಎಣಿಕೆ ನ.14ರಂದು ನಡೆಯಲಿದೆ.

ಅಭ್ಯರ್ಥಿಗಳ ಚುನಾವಣಾ ವೆಚ್ಚ ಗರಿಷ್ಠ ಮಿತಿ ಈ ರೀತಿ ಇದೆ- ಮಹಾನಗರ ಪಾಲಿಕೆ (ಬಿಬಿಎಂಪಿ ಹೊರತುಪಡಿಸಿ) ₹3 ಲಕ್ಷ, ನಗರಸಭೆ ₹2 ಲಕ್ಷ, ಪುರಸಭೆ ₹1.50 ಲಕ್ಷ, ಪಟ್ಟಣ ಪಂಚಾಯತಿ ₹1 ಲಕ್ಷ.

14 ನಗರ ಸ್ಥಳೀಯ ಸಂಸ್ಥೆಗಳಲ್ಲಿ 1388 ಮತಗಟ್ಟೆ ಇರಲಿದ್ದು, ಒಟ್ಟು 418 ವಾರ್ಡ್‌ಗಳಿಗೆ 13,04,614 ಮತದಾರರು ಮತ ಚಲಾಯಿಸಲಿದ್ದಾರೆ ಎಂದು ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿ ಎನ್.ಆರ್. ನಾಗರಾಜು ತಿಳಿಸಿದ್ದಾರೆ.

**ಚುನಾವಣೆ ನಡೆಯುವ ನಗರಗಳ ವಿವರ**

| | |
|---|---|
| ಮಹಾನಗರ ಪಾಲಿಕೆ | ದಾವಣಗೆರೆ, ಮಂಗಳೂರು. |
| ನಗರಸಭೆ | ಕನಕಪುರ, ಕೋಲಾರ, ಮುಳಬಾಗಲು, ಕೆ.ಜಿ.ಎಫ್ (ರಾಬರ್ಟ್‌ಸನ್‌ಪೇಟೆ), ಗೌರಿಬಿದನೂರು, ಚಿಂತಾಮಣಿ. |
| ಪುರಸಭೆ | ಮಾಗಡಿ, ಬೀರೂರು, ಕಂಪ್ಲಿ. |
| ಪಟ್ಟಣ ಪಂಚಾಯಿತಿ | ಜೋಗ್-ಕಾರ್ಗಲ್, ಕುಂದಗೋಳ, ಕೂಡ್ಲಿಗಿ. |